ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕ್ರಮ ತೆಗೆದುಕೊಳ್ಳುತ್ತೇನೆ ಎಂದರೆ ಏನು ಕ್ರಮ ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮ್ಮ ಜಿಲ್ಲೆ, ನಿಮ್ಮ ಜಿಲ್ಲೆ, ಚಾಮರಾಜನಗರ, ಮಂಡ್ಯ, ತುಮಕೂರು ಈ ಜಿಲ್ಲೆಗಳಲ್ಲೆಲ್ಲಾ ಸಿರಿಕಲ್ಚರ್ ಇಂಡಸ್ಟ್ರೀ ವಿಚಾರದಲ್ಲಿ ರೀಲರ್ಸ್ ತೊಂದರೆ ಇರತಕ್ಕಂಥ ಆದ್ದು ಮತ್ತು ಗೂಡಿನ ಬೆಲೆ ಕಡಿಮೆಯಾಗಿರತಕ್ಕಂಥಾದ್ದು, ಚೈನಾದಿಂದ ಬರುತ್ತಾ ಇರತಕ್ಕಂಥ ರೇಷ್ಮೆ, ಇದರ ಮೇಲೆ ಇರತಕ್ಕಂಥ ಕ್ರಮಗಳು/ಇವೆಲ್ಲಾ ಒಂದಕ್ಕೊಂದು ಚೈನ್ ಇದ್ದಹಾಗೆ. ಇವೆಲ್ಲಾ ಒಂದಕ್ಕೊಂದು ಕೊಂಡಿಗಳು, ಇದನ್ನು ಸರಿ ಮಾಡಿಸಬೇಕಾದರೆ. ಮೊದಲು ಗೂಡಿನ ಬೆಲೆ 120, 130 ರೂಪಾಯಿಗಳು ಇರಬೇಕು. ಆದಾದ ಮೇಲೆ ರೀಲರ್ಸ್‌ಗಳು ಬದುಕಬೇಕು. ರೀಲರ್ಸ್‌ಗಳು ಬದುಕಬೇಕೆಂದರೆ ಫಿಲೇಚರ್ಸ್ ಬದುಕಬೇಕು. ಆದಾದ ಮೇಲೆ ವೀವರ್ಸ್ ಬದುಕಬೇಕಾಗುತ್ತದೆ. ಆದಾದ ಮೇಲೆ ಮಾರ್ಕೆಟಿಂಗ್ ಬೇಕಾಗುತ್ತದೆ. ಏನು ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಹೇಳಿದರೆ. ಇವೆಲ್ಲವೂ ಸಹಿತ ರೀಲರ್ಸ್ ಇವತ್ತು 15 ಸಾವಿರ ಇದ್ದವರು 3 ಸಾವಿರ ಜನಕ್ಕೆ ಇಳಿದಿದ್ದಾರೆ. ರೀಲಿಂಗ್ ಬಿಟ್ಟುಬಿಟ್ಟಿದ್ದಾರೆ. ಆ ಗೂಡು ತೆಗೆದುಕೊಳ್ಳುವವರೇ ಇಲ್ಲ. ಈ ಗೂಡು ತೆಗೆದುಕೊಳ್ಳಿ, ತೆಗೆದುಕೊಳ್ಳಿ ಎಂದು ಹೇಳುತ್ತಾ ಇದ್ದೇವೆ. ನಾವು ಇದನ್ನಾದರೂ ಏಕೆ ಮಾಡಿರತಕ್ಕಂಥಾದ್ದು. ಮಾರ್ಕೆಟ್ ಇಂಟರ್‌ವೆನ್‌ಷನ್‌ಗೆ ಎಂದು ನಾವು ಮಾಡಿರತಕ್ಕಂಥಾದ್ದು. ಇಲ್ಲಿ ತಾವು ಎದ್ದುನಿಂತು ಪ್ರಶ್ನೆ ಕೇಳಿದ್ದೀರಿ, ಸರ್ಕಾರದ ಗಮನವನ್ನು ಸೆಳೆದಿದ್ದೀರಿ, ನಿಮಗೆ ಸ್ಪಷ್ಟವಾದ ಉತ್ತರವನ್ನು ಕೊಟ್ಟಿದ್ದೇವೆ. ಇದನ್ನು ಸರಿಪಡಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದರೆ ಇದರ ಬಗ್ಗೆ ಫೈನಾನ್‌ಷಿಯಲ್ ಇಂಪ್ಲಿಕೇಷನ್ ಇದೆ. ನೀವು ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡಬೇಕೆಂಬ ದೃಷ್ಟಿಯಿಂದ ಹೇಳಿದ್ದೀರಿ. ರೈತರ ಹಿತವನ್ನು ಕಾಪಾಡುವ ದೃಷ್ಟಿಯಿಂದ ಸಹಿತ ಹೇಳಿದ್ದೀರಿ. ನೇಕಾರರ ಹಿತವನ್ನು ಕಾಪಾಡಬೇಕೆಂಬ ಉದ್ದೇಶ ಇಟ್ಟುಕೊಂಡಿದ್ದೀರಿ. ಇವೆಲ್ಲಾ ವಿಚಾರಗಳೂ ಇರತಕ್ಕಂಥ ಸನ್ನಿವೇಶದಲ್ಲಿ ನಾವೆಲ್ಲರೂ ಸಮಗ್ರ ವಿಚಾರ ಮಾಡಬೇಕಾಗುತ್ತದೆ. ಏಕೆಂದರೆ, ಮೊನ್ನೆ ಕೇಂದ್ರ ಸರ್ಕಾರದ ರೇಷ್ಮೆ ಇಲಾಖೆಗೆ ಸಂಬಂಧಪಟ್ಟಂಥ ಸಚಿವರಾದ ಮಾನ್ಯ ಶಂಕರ್‌ಸಿಂಗ್ ವಾಘೇಲಾರವರು ಬಂದಿದ್ದರು. ಆ ಸಂದರ್ಭದಲ್ಲಿ ನಾನು ನೇರವಾಗಿ ಇದನ್ನೆಲ್ಲಾ ಮಾತನಾಡಿದ್ದೇನೆ. ಕೇಂದ್ರ ಸರ್ಕಾರದ ಸಹಕಾರವನ್ನು ಸಹಿತ ತೆಗೆದುಕೊಂಡು, ಇದನ್ನು ಸರಿಪಡಿಸಲಿಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳಿಗೆ ಸಬ್ಸಿಡಿ ದರವನ್ನು ರದ್ದುಗೊಳಿಸಿರುವುದು

57(332) ಶ್ರೀ ಸಿ.ಟಿ. ರವಿ.(ಚಿಕ್ಕಮಗಳೂರು) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳಿಗೆ ನಿಗದಿಗೊಳಿಸಲಾಗಿದ್ದ ಸಬ್ಸಿಡಿ ದರವನ್ನು ರದ್ದುಗೊಳಿಸಲು ತೀರ್ಮಾನ ಕೈಗೊಂಡಿರುವುದು ನಿಜವೇ ;

ಆ) ಈ ತೀರ್ಮಾನಕ್ಕೆ ಕಾರಣಗಳೇನು ;

ಇ) ಇಲ್ಲದಿದ್ದಲ್ಲಿ ಖಾದಿಗೆ ರಿಯಾಯಿತಿ ನೀಡದಿರುವುದರ ಬಗ್ಗೆ ಸರ್ಕಾರದ ನಿಲುವೇನು ;

ಈ) ಸದರಿ ಗ್ರಾಮೋದ್ಯೋಗಗಳ ಅಭಿವೃದ್ಧಿಗೆ ಸರ್ಕಾರವು ವಿಶೇಷ ಕಾರ್ಯ ಯೋಜನೆಗಳನ್ನು ಕೈಗೊಳ್ಳುವುದೇ ;

ಉ) ಇತ್ತೀಚೆಗೆ ರೈಲ್ವೆ ಇಲಾಖೆಯ ಸೂಚನೆಯಂತೆ ರೈಲುಗಳಲ್ಲಿ ಕಾಫಿ-ಟೀ ಕುಡಿಯಲು ಬಳಸುವ ರೈಲುಗಳಲ್ಲಿ ಮಣ್ಣಿನ ಕುಡಿಕೆಗಳನ್ನು ವಿತರಿಸುವಂತೆ ತಿಳಿಸಿರುವುದರಿಂದ ಈ ಸರ್ಕಾರವು ಆ ಉದ್ದಿಮೆಯನ್ನು ಬಲಪಡಿಸಲು ಖಾದಿ ಮಂಡಲಿಯ ಮತಿಯಿಂದ ಯಾವ ಕ್ರಮ ಕೈಗೊಳ್ಳುವುದು;

ಊ) ಗ್ರಾಮೋದ್ಯೋಗ (ಅಥವಾ) ಖಾದಿ ಮಂಡಳಿ ಮೂಲಕ ಗ್ರಾಮಾಂತರದ ಕುಲಕಸುಬಿನ ಕೆಲಸದವರಿಗೆ ಈ ದಿಕ್ಕಿನಲ್ಲಿ ಯಾವ ಯೋಜನೆಗಳನ್ನು ರೂಪಿಸಲಿದೆ (ವಿವರ ಒದಗಿಸುವುದು) ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ತೀರ್ಮಾನ ಕೈಗೊಂಡಿರುವುದಿಲ್ಲ. ಆದರೆ, ಖಾದಿ ಆಯೋಗ ಮುಂಬೈ ಇವರ ಸುತ್ತೋಲೆ ದಿನಾಂಕ : 21.5.2004 ರಂದು ಖಾದಿ ಉತ್ಪನ್ನಗಳ ಮಾರಾಟದ ಮೇಲೆ ಪ್ರಾಯೋಗಿಕವಾಗಿ ದಿನಾಂಕ: 1.4.2004 ರಿಂದ ಅನ್ವಯವಾಗುವಂಥ ರಿಬೇಟ್ ನೀತಿಯ ಬದಲಾಗಿ ಮಾರುಕಟ್ಟೆ ಅಭಿವೃದ್ಧಿ ನೆರವು (ಎಂ.ಡಿ.ಎ) ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ.

ಈ ಯೋಜನೆಯು ಅನುಷ್ಠಾನಗೊಳಿಸುವಲ್ಲಿ ಯಶಸ್ವಿ ಅಲ್ಲವೆಂದು ಕಂಡು ಬಂದಲ್ಲಿ ರಿಬೇಟ್ ನೀತಿಯನ್ನೇ ಮುಂದುವರೆಸಲು ಪರಿಶೀಲಿಸುವುದಾಗಿ ತಿಳಿಸಿರುತ್ತಾರೆ.

ಆ) ಈ ಯೋಜನೆಯ ಅನುಷ್ಠಾನದಿಂದ ಮಾರುಕಟ್ಟೆಗೆ ಉತ್ತೇಜನ ನೀಡಲು ಹಾಗೂ ಹಳೆಯ ದಾಸ್ತಾನು ಪೂರ್ಣ ಮಾರಾಟ ಮಾಡಲು ಅನುಕೂಲವಾಗುತ್ತದೆ.

ಇ) ರಿಬೇಟನ್ನು ರಾಜ್ಯ ಸರ್ಕಾರವು ನಿಲ್ಲಿಸಿರುವುದಿಲ್ಲ.

ಈ) ಗ್ರಾಮೋದ್ಯೋಗಗಳ ಅಭಿವೃದ್ಧಿಗಾಗಿ ಅಂಚು ಹಣ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ.

ಉ) ರೈಲ್ವೆ ಇಲಾಖೆಯ ಸೂಚನೆಯಂತೆ ರೈಲುಗಳಲ್ಲಿ ಕಾಫಿ ಟೀ ಕುಡಿಯಲು ಬಳಸುವ ಮಣ್ಣಿನ ಕುಡಿಕೆಗಳನ್ನು ಸರಬರಾಜು ಮಾಡುವ ಕುರಿತು ಮಂಡಳಿಯಿಂದ ರೈಲ್ವೆ ಇಲಾಖೆಯ ಅಧಿಕಾರಿಗಳೊಂದಿಗೆ ದಿನಾಂಕ ; 17.6.2004 ರಂದು ಚರ್ಚಿಸಲಾಗಿದ್ದು, ಚರ್ಚೆಯ ಸಮಯದಲ್ಲಿ ರೈಲ್ವೆ ಇಲಾಖೆಯ ಅಧಿಕಾರಿಗಳು ಈ ಮಣ್ಣಿನ ಕುಡಿಕೆಗಳಿಗೆ ನೀಡಬಹುದಾದ ಗರಿಷ್ಠ ಬೆಲೆ ರೂ 0.70 ಪೈಸೆ ಎಂದು ತಿಳಿಸಿರುತ್ತಾರೆ. ಅಲ್ಲದೆ ಸಾರ್ವಜನಿಕರ ಬಳಕೆಗೆ ಬೇಕಾದ ಮಣ್ಣಿನ ಲೋಟದ ಮಾದರಿಯನ್ನು ಪರಿಶೀಲಿಸಿ ಈ ದಿಸೆಯಲ್ಲಿ ಕ್ರಮ ತೆಗೆದು ಕೊಳ್ಳಲು ಖಾದಿ ಮಂಡಳಿಯಿಂದ ಧನಸಹಾಯ ಪಡೆದೆ ಕುಂಬಾರಿಕೆ ಉದ್ದಿಮೆದಾರರ ಸಭೆಯನ್ನು ದಿನಾಂಕ ; 23.6.2004 ರಂದು ಮಂಡಳಿಯಿಂದ ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಕಾಫಿ ಟೀ ಕುಡಿಯಲು ಬಳಸುವ ಮಣ್ಣಿನ ಕುಡಿಕೆಗಳು ರೈಲ್ವೆ ಇಲಾಖೆಯ ನಿಗದಿಪಡಿಸಿದ ಅಳತೆ ಹಾಗೂ ದರದಂತೆ ಸರಬರಾಜು ಮಾಡಲು ವೈಯಕ್ತಿಕ ; ಸಂಘ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ಚರ್ಚಿಸಿ ಮಂಡಳಿಯಿಂದ ಸೂಕ್ತ ಮಾರ್ಗದರ್ಶನ ನೀಡಲಾಗಿದೆ. ಈ ಸಭೆಯಲ್ಲಿ ಉದ್ದಿಮೆದಾರರು ಒದಗಿಸ ಬಹುದಾದ ಕುಡಿಕೆ ದರ ಹಾಗೂ ಪ್ರಮಾಣದ ಬಗ್ಗೆ ಚರ್ಚಿಸಲಾಗಿದೆ. ಈ ವಿವರಗಳೊಂದಿಗೆ ಮತ್ತು ದಿನಾಂಕ ; 6.7.2004 ರಂದು ರೈಲ್ವೆ ಇಲಾಖೆಯ ಅಧಿಕಾರಿಗಳೊಂದಿಗೆ ಎರಡನೇ ಬಾರಿ ಮಂಡಳಿಯು ಚರ್ಚಿಸಿದ್ದು, ಬಿಹಾರ ರಾಜ್ಯದಿಂದ ಒಂದು ಲೋಟಕ್ಕೆ ರೂ. 0.45 ಪೈಸೆ (ನಲವತ್ತೈದು ಪೈಸೆ) ದರದಂತೆ ಸರಬರಾಜು ಮಾಡಬಹುದಾದರೇ ಮಾಡುತ್ತಿರುವ ಬಗ್ಗೆ ಹಾಗೂ ಸದರಿ ಕುಡಿಕೆಗಳನ್ನು ಖರೀದಿಸಲು ರೂ. 0.70 ಪೈಸೆಗಿಂತ ಕಡಿಮೆ ಬೆಲೆಗೆ ಸರಬರಾಜು ಮಾತ್ರ ಮುಂದಿನ ಕ್ರಮ ತೆಗೆದುಕೊಳ್ಳುವ ಬಗ್ಗೆ ರೈಲ್ವೆ ಇಲಾಖೆ ಅಧಿಕಾರಿಗಳು ತಿಳಿಸಿರುತ್ತಾರೆ.

ಊ) ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಗ್ರಾಮಾಂತರ ಮಡಿಕೆ ಕುಡಿಕೆ ಮಾಡುವ ಕುಂಬಾರಿಕೆ ಕೆಲಸದವರಿಗೆ ಅಂಚು ಹಣ ಯೋಜನೆಯಡಿಯಲ್ಲಿ ಬ್ಯಾಂಕ್ ಸಾಲ ಒದಗಿಸುವ ವ್ಯವಸ್ಥೆ ಮಾಡಲಾಗುತ್ತಿದೆ.

11.40 ಎಎಂ

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೇ, ಖಾದಿಗೆ ನಮ್ಮ ದೇಶದಲ್ಲಿ ಐತಿಹಾಸಿಕ ಹಿನ್ನೆಲೆ ಇದೆ. ಅದು ಒಂದು ಸಾರ್ವಭೌಮತೆಯ ಸ್ವಾಭಿಮಾನದ ಸಂಕೇತವಾಗಿತ್ತು. ಆದರೆ ಇಂತಹ ಖಾದಿಗೆ ಇವತ್ತು ಸಬ್ಸಿಡಿ ಕೊಡುವುದನ್ನು ಕಡಿತ ಮಾಡಿ ಮಾರುಕಟ್ಟೆ ಅಭಿವೃದ್ಧಿಗೆ ಕ್ರಮ ಕೈಗೊಂಡಿದ್ದೇವೆಂದು ಸರ್ಕಾರ ಉತ್ತರವನ್ನು ಕೊಟ್ಟಿದೆ. ಮಾರುಕಟ್ಟೆ ಅಭಿವೃದ್ಧಿಗೆ ಕ್ರಮ ಕೈಗೊಂಡಿದ್ದೇವೆಂದರೆ ಯಾವ ಮೂಲಕ ಖಾದಿಯನ್ನು ಸಾರ್ವತ್ರಿಕ ಮಾಡತಕ್ಕಂಥ ಕ್ರಮವನ್ನು ಕೈಗೊಂಡಿದೆ ? ಇದರಿಂದ ಖಾದಿ ಬೇಡಿಕೆ ಹೆಚ್ಚಾಗುವುದಕ್ಕೆ ಏನು ಕ್ರಮ ಕೈಗೊಂಡಿದ್ದಾರೆ ಎನ್ನುವುದನ್ನು ಸ್ಪಷ್ಟಪಡಿಸಿಲ್ಲ. ಮತ್ತು ರಿಯಾಯಿತಿ ಬಗ್ಗೆ ಕೇಳಿದ್ದಾರೆ. ಈ ಯೋಜನೆಯ ಅನುಷ್ಠಾನದಿಂದ ಮಾರುಕಟ್ಟೆಗೆ ಉತ್ತೇಜನ ನೀಡಲು ಮತ್ತು ಹಳೆಯ ದಾಸ್ತಾನು ಸಂಪೂರ್ಣ ಮಾರಾಟ ಮಾಡಲು ಅನುಕೂಲವಾಗುತ್ತೆ ಎಂದು ಹೇಳಿದೆ. ಅಂದರೆ ಸಬ್ಸಿಡಿ ಇದ್ದಾಗಲೇ ಹಳೆಯ ದಾಸ್ತಾನು ಕಡಿಮೆಯಾಗಲಿಲ್ಲ. ಮತ್ತಷ್ಟು ಸಬ್ಸಿಡಿ ಕೊಟ್ಟಿದ್ದರೆ ಮಾತ್ರ ಹಳೆಯ ದಾಸ್ತಾನನ್ನು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಿಕ್ಕೆ ಸಾಧ್ಯವಾಗುತ್ತಿತ್ತು. ಆದರ ಈಗ ಮಾರುಕಟ್ಟ ಅಭಿವೃದ್ಧಿಯಿಂದಾಗಿಯೇ ಹಳೆಯ ದಾಸ್ತಾನಿಗೆ ರಿಯಾಯಿತಿ ಆಗುತ್ತದೆ ಅಂದರೆ ಇದೊಂದು ಅವೈಜ್ಞಾನಿಕ, ಇವರ ಉತ್ತರ ಹೇಗೆ ಇದರಿಂದ ರಿಯಾಯಿತಿ ಆಗಿದೆ ಎನ್ನುವುದನ್ನು ಸ್ಪಷ್ಟಪಡಿಸಬೇಕು. ಏಕೆಂದರೆ ನಾನು ಖಾದಿ ಮಂಡಲಿಯ ಅಂಗಡಿಗೆ ಹೋಗಿ ಅವರ ಹತ್ತಿರ ಕೇಳಿದೆ ನಿಮ್ಮ ವ್ಯಾಪಾರ ಹೇಗಿದೆ ಅಂತ; ಅವರು ಹೇಳಿದರು ಸಬ್ಸಿಡಿ ರದ್ದು ಮಾಡಿದ ನಂತರ 40 ರಿಂದ 50 ಪರ್ಸೆಂಟ್ ವ್ಯಾಪಾರ ಖೋತಾ ಆಗಿದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಇದನ್ನು ಸ್ಪಷ್ಟಪಡಿಸಬೇಕೆಂದು ನಾನು ಕೇಳಲಿಕ್ಕೆ ಇಚ್ಛಿಸುತ್ತೇನೆ. ಮತ್ತು ಇದಕ್ಕೋಸ್ಕರ ಗ್ರಾಮೋದ್ಯೋಗಗಳ ಅಭಿವೃದ್ಧಿಗೆ ಅಂಚು ಹಣ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದ್ದೇವೆಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅಂಚು ಹಣ ಯೋಜನೆಯಲ್ಲಿ ಎಷ್ಟು ಹಣವನ್ನು ಸರ್ಕಾರ ತೆಗೆದು ಇಟ್ಟಿದೆ ಎನ್ನತಕ್ಕಂಥ ಉತ್ತರದಲ್ಲಿ ಇಲ್ಲ. ಹಾಗಾಗಿ, ಈ ಖಾದಿಗೆ ಅಂಚು ಹಣ ಎಷ್ಟು ಹಣವನ್ನು ತೆಗೆದಿಟ್ಟಿದೆ ಮತ್ತು ಈಗಾಗಲೇ ಕೇಂದ್ರದ ರೈಲ್ವೆ ಖಾತೆ ಸಚಿವರು ರೈಲಿನಲ್ಲಿ ಮಡಿಕೆ ಕುಡಿಕೆಗಳ ಮೂಲಕ ಕಾಫಿ, ಟೀ, ಹಾಲು ಮೊಸರುಗಳನ್ನು ಕೊಡತಕ್ಕಂಥ ಒಂದು ಕ್ರಮವನ್ನು ತೆಗೆದುಕೊಂಡಿದ್ದಾರೆ ಅದು ಸ್ವಾಗತಾರ್ಹವಾದ ಕ್ರಮ. ಆದರೆ ಅದಕ್ಕೂ ಕೂಡ ಬಿಹಾರ್‌ದಿಂದಲೋ, ಉತ್ತರ ಪ್ರದೇಶದಿಂದಲೋ ಆ ಕುಡಿಕೆ ಕರ್ನಾಟಕದ ರೈಲ್ವೆ ನಿಲ್ದಾಣಕ್ಕೆ ಅಂದರೆ ಅದು ಮೂಗಿಗಿಂತ ಮೂಗುತಿಯೇ ಭಾರ ಎನ್ನುವಂತೆ ಆಗುತ್ತದೆ. ಅಲ್ಲಿಂದ ಬರತಕ್ಕಂಥ ಟ್ರಾನ್ಸ್‌ಪೋರ್ಟೇಷನ್ ಖರ್ಚು ಜಾಸ್ತಿಯಾಗುತ್ತದೆ. ಇದರ ಉಪಯೋಗವನ್ನು ಕರ್ನಾಟಕದಲ್ಲಿರತಕ್ಕಂಥ ಗುಡಿ ಕೈಗಾರಿಕೆಗಳು ತೆಗೆದುಕೊಳ್ಳಬೇಕೆಂದರೆ ಅದಕ್ಕೆ ಉತ್ತೇಜನವನ್ನು ಯಾವ ರೀತಿ ಕೊಡತಕ್ಕಂಥ ತೀರ್ಮಾನ ಮಾಡಿದೆ ಎನ್ನುವುದಕ್ಕೆ ಉತ್ತರ ಸ್ಪಷ್ಟ ಇಲ್ಲ. ಬ್ಯಾಂಕ್‌ಗಳು ಸಾಲ ನೀಡುವುದಕ್ಕೆ ಯೋಜನೆ.

ಅಧ್ಯಕ್ಷರು : ನೇರವಾಗಿ ಪ್ರಶ್ನೆ ಕೇಳಿ. ಈ ರೀತಿ ಆದರೆ ಹೇಗೆ ?

ಶ್ರೀ ಸಿ.ಟಿ. ರವಿ : ಬ್ಯಾಂಕ್‌ಗಳ ಮೂಲಕ ಸಾಲ ಕೊಡುವುದಕ್ಕೆ ಯೋಜನೆ ಮಾಡಿದ್ದೇವೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ ಈಗಾಗಲೇ ನಿರುದ್ಯೋಗಿ ಯುವಕರಿಗೆ ಅಲ್ಲಿ ಇಂಟರ್‌ವ್ಯೂ ಮಾಡಿದರೂ ಕೂಡ ಬ್ಯಾಂಕ್‌ನಲ್ಲಿ ಸಾಲ ಕೊಡಬೇಕೆಂದು ಇದ್ದರೂ ಸಹ ನೂರಾರು ಸಬೂಬುಗಳು ಹೇಳಿ ಸಾಲ ಕೊಡುತ್ತಿಲ್ಲ. ಈ ಯೋಜನೆಯು ಸಹ ಅದೇ ರೀತಿ ಆಗುತ್ತದೆಯೇ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಸದಸ್ಯರಾದ ರವಿಯವರು ಕೇಳಿರತಕ್ಕಂಥ ಪ್ರಶ್ನೆ ಸರಿಯಾದ ಪ್ರಶ್ನೆ ಇದೆ. ಖಾದೀ ಮತ್ತು ವಿಲೇಜ್ ಇಂಡಸ್ಟ್ರೀಸ್ ಅನ್ನು ರೀವ್ಯಾಂಪ್ ಮಾಡುವುದಕ್ಕೆ ನಾವು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದ್ದೇವೆ. ತಾವು ತಿಳಿದುಕೊಂಡಿರುವ ಹಾಗೆ ಸಬ್ಸಿಡಿಯನ್ನು ನಿಲ್ಲಿಸಿಲ್ಲ. ರಾಜ್ಯ ಸರ್ಕಾರದವರೂ ನಿಲ್ಲಿಸಿಲ್ಲ. ಕೇಂದ್ರ ಸರ್ಕಾರದವರೂ ನಿಲ್ಲಿಸಿಲ್ಲ. ಸಬ್ಸಿಡಿಯನ್ನು ಎಂ ಡಿ ಎ ಮೂಲಕವಾಗಿ ಕೊಡಬೇಕು ಎಂದು ಒಂದು ಸ್ಕೀಮ್‌ನ್ನು ಕೇಂದ್ರ ಸರ್ಕಾರದ ವಶದಲ್ಲಿರತಕ್ಕಂಥ ಖಾದೀ ಮತ್ತು ವಿಲೇಜ್ ಇಂಡಸ್ಟ್ರೀಸ್-ಕಮೀಷನ್‌ನವರು ಕಾನೂನು ಮಾಡಿದರು. ಈಗ ತಾನೇ ನನಗೆ ಸುದ್ದಿ ಬಂದಿದೆ. ಮೊನ್ನೇ 20ನೇ ತಾರೀಖು 3 ದಿವಸಗಳ ಹಿಂದೆ ಆ ಎಂ ಡಿ ಎ ಸ್ಕೀಮ್ ಎಂದು ಏನು ಅಪರೇಷನ್‌ನಲ್ಲಿ ಇತ್ತು ಅದನ್ನು ಅಬೆಯನ್ಸ್‌ನಲ್ಲಿ ಇಟ್ಟು ಅವರು ಮತ್ತೆ ಈ ಹಿಂದೆ ಯಾವ ರೀತಿ ಸಬ್ಸಿಡಿಯನ್ನು ಕೊಡುತ್ತಿದ್ದರು, ರಿಯಾಯಿತಿಯನ್ನು ಕೊಡುತ್ತಿದ್ದರು ಅದನ್ನು ಮುಂದುವರೆಸಬೇಕು ಅಂತ ಹೇಳಿ ಅವರು ಈಗಾಗಲೇ ನಮಗೆ ಕಮ್ಯುನಿಕೇಶನ್ ಅನ್ನು ಮಾಡಿದ್ದಾರೆ. ಇದರಿಂದ ಸ್ವಲ್ಪ ಅನುಕೂಲವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಎರಡನೆಯದಾಗಿ ರಾಜ್ಯ ಸರ್ಕಾರ ನಾರ್ಮಲ್ ಡೇಸ್‌ಗಳಲ್ಲಿ 10 ಪರ್ಸೆಂಟ್ ಕಮೀಷನ್ ಕೊಡುವುದಕ್ಕೆ ನಾವು ಈಗಾಗಲೇ ರಿಯಾಯಿತಿಗಳನ್ನು ಕೊಟ್ಟು ಕೊಂಡು ಬಂದಿದ್ದೇವೆ. ವಿಶೇಷವಾದ ದಿನಗಳಲ್ಲಿ ಹಬ್ಬ, ಹರಿದಿನ, ಗಾಂಧಿ ಜಯಂತಿ, ಇಂತಹ ದಿನಗಳಲ್ಲಿ ಇನ್ನೂ 5 ಪರ್ಸೆಂಟ್ ಹೆಚ್ಚು ಕೊಡಬೇಕು ಅಂತ ಹೇಳಿ, ಒಟ್ಟು 15 ಪರ್ಸೆಂಟ್ ಕೊಡಬೇಕು ಎನ್ನತಕ್ಕಂಥಾದ್ದು, ಈಗ ಚಾಲ್ತಿಯಲ್ಲಿರತಕ್ಕಂಥ ಒಂದು ಕ್ರಮ ಮಾನ್ಯ ಅಧ್ಯಕ್ಷರೇ, ಈಗ ಇದನ್ನು ಇನ್ನೂ ಒಂದು 5 ಪರ್ಸೆಂಟ್ ಹೆಚ್ಚು ಮಾಡಬೇಕು ಎನ್ನತಕ್ಕಂಥಾದ್ದು ಇದಕ್ಕೆ ನಮ್ಮ ಹಣಕಾಸಿನ ಸಚಿವರು, ಮಾನ್ಯ ಉಪ ಮುಖ್ಯಮಂತ್ರಿಗಳು ಇದಕ್ಕೋಸ್ಕರ ಸ್ವಲ್ಪ ನಮಗೆ ಲಿಬರಲ್ ಆಗಿ ಹಣವನ್ನು ಕೊಟ್ಟಿದ್ದಾರೆ. ಆದ್ದರಿಂದ ಅದನ್ನು 20 ಪರ್ಸೆಂಟ್ ಮಾಡಬೇಕು ಎನ್ನತಕ್ಕಂಥ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಈ 20 ಪರ್ಸೆಂಟ್ ಸೇರಿದರೆ 40 ಪರ್ಸೆಂಟ್‌ನಷ್ಟು ಕಮೀಷನ್ ಇದರಿಂದ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆಮೇಲೆ ಈ ಅಂಚು ಹಣ ಯೋಜನೆ ಈ ಖಾದೀ ಮಂಡಲಿಗೆ ಮಾನ್ಯ ಉಪ ಮುಖ್ಯಮಂತ್ರಿಗಳು 6 ಕೋಟಿ 60 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ವರ್ಷದ ಬಜೆಟ್‌ನಲ್ಲಿ, ಆದ್ದರಿಂದ ಬಹಳಷ್ಟು ಈ ರೀತಿಯ ಸಣ್ಣ ಗುಡಿ ಕೈಗಾರಿಕೆಗಳು ಏನಿವೆ ಮೊದಲನೇ ಸಲ ಮಾನ್ಯ ಹಣಕಾಸು ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ ಈ ಯೋಜನೆಗೆ ಹೆಚ್ಚು ಹಣವನ್ನು ಕೊಟ್ಟಿದ್ದಾರೆ. ಅದನ್ನು ನಾವು ಉಪಯೋಗ ಮಾಡಿಕೊಳ್ಳುತ್ತೇವೆ. ತಾವು ಈ ರೆವ್ಲೇಸ್ ಬಗ್ಗೆ ಸ್ವಾಗತ ಮಾಡಿದ್ದೀರಿ. ಅರ್ಧ ಮನಸ್ಸಿನಿಂದ ಸ್ವಾಗತ ಮಾಡಿದ್ದೀರಿ. ಆದರೆ ಅದೊಂದು ಕಾಂಪಿಟೇಟೀವ್ ರೇಟನ್ನು ಸಾಮಾನ್ಯವಾಗಿ ನಾವು ಮಾಡತಕ್ಕಂಥ ಸಂದರ್ಭದಲ್ಲಿ ನೀವೇ ಕೇಳುತ್ತೀರಿ. 70 ಪೈಸೆ ಕುಡಿಕೆಗೆ ನೀವು ಏಕೆ 90 ಪೈಸೆ ಕೊಟ್ಟಿದ್ದೀರಿ ಅಂತ. ಟ್ರಾನ್ಸ್‌ಪರೆಂಟ್ ಆಗಿ, ಯಾರು ಕಡಿಮೆಗೆ ಮಾಡಿಕೊಡುತ್ತಾರೋ ಅವರಿಗೆ ನಾವು ಕೊಡಬೇಕಾಗುತ್ತದೆ. ಆ ರೈಲ್ವೆ ಬೋರ್ಡ್ ಜೊತೆಯಲ್ಲಿ ನಾವು ಈಗಾಗಲೇ ಮೂರು ಸಲ ನಮ್ಮ ಖಾದೀ ಮತ್ತು ವಿಲೇಜ್ ಇಂಡಸ್ಟ್ರೀಸ್‌ನವರು ಮಾತನಾಡಿದ್ದಾರೆ. ಅವರು ಈ ಸ್ಕೀಮ್ ಮಾನ್ಯ ಲಾಲು ಪ್ರಸಾದ್ ಯಾದವ್‌ರವರು ಅನೌನ್ಸ್ ಮಾಡಿ 2 ತಿಂಗಳು ಆಯಿತು. ಈಗಾಗಲೇ ನಾನು 3 ಸಭೆಗಳನ್ನು ಮಾಡಿಸಿದ್ದೇನೆ. ಏಕೆಂದರೆ ನಮ್ಮ ಕುಂಬಾರರಿಗೆ, ಕುಡಿಕೆ ಮಾಡುವವರಿಗೆ ಬಡವರಿಗೆ ಅನುಕೂಲವಾಗುತ್ತದೆಂದು ಹೇಳಿ, ಅದರ ಬಗ್ಗೆ ನಾನು ತತ್‌ಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನತಕ್ಕಂಥ ಮಾತನ್ನೂ ಸಹ ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಾದ ಸಿಂಧ್ಯಾರವರು ಉತ್ತರ ಕೊಡುತ್ತಾ ಸಾಮಾನ್ಯ ರಿಯಾಯಿತಿ 10 ಪರ್ಸೆಂಟ್ ಕೊಡುತ್ತಿದ್ದೇವೆಂದು ಹೇಳಿದರು. ಆದರೆ 14-1-2004ರಲ್ಲಿ ಹೊರಡಿಸಿದ ತಕ್ಕಂಥ ಸುತ್ತೋಲೆಯಲ್ಲಿ ಸಾಮಾನ್ಯ ರಿಯಾಯಿತಿ ಕೇವಲ 5 ಪರ್ಸೆಂಟ್ ಮಾತ್ರ ಎಂದು ಹೇಳಿದೆ. ಇದು ಸಾಕೇ ? ಇದರಿಂದ ಖಾದೀ ವಸ್ತ್ರವನ್ನು ಹೆಚ್ಚು ಪಾಪ್ಯುಲರ್ ಮಾಡುವುದಕ್ಕೆ ಸಾಧ್ಯವಾಗುತ್ತಾ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೇ, ಅವರು ಯಾವ ಸರ್ಕ್ಯುಲರ್ ಕಾಪಿ ಇಟ್ಟುಕೊಂಡಿದ್ದಾರೋ ಅದನ್ನು ನನಗೆ ಕಳುಹಿಸಿಕೊಡಲಿ; ನಾನು ಏನು ಅವರಿಗೆ ಭರವಸೆ ಕೊಟ್ಟಿದ್ದೇನೆಯೋ ಅದರ ಪ್ರಕಾರ ನಡೆದುಕೊಳ್ಳುತ್ತೇನೆ.

ಅಧ್ಯಕ್ಷರು : ದಯಮಾಡಿ ಕಳುಹಿಸಿಕೊಡಿ. ಈಗ ಮಾನ್ಯ ಹಾಲಾಡಿ ಶ್ರೀನಿವಾಸ ಶೆಟ್ಟಿಯವರು. (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು). ಈಗ ಹೆಚ್.ಡಿ. ಬಸವರಾಜುರವರ ಪ್ರಶ್ನೆ 335 ನ್ನು ಅವರ ಪರವಾಗಿ ಎನ್. ಯೋಗೀಶ್ ಭಟ್ ರವರು ಕೇಳುತ್ತಾರೆ.

ಕೆ.ಎಸ್.ಐ.ಎಂ.ಸಿ. ಯನ್ನು ಮುಚ್ಚುವ ಬಗ್ಗೆ

57(335) ಶ್ರೀ ಹೆಚ್.ಡಿ. ಬಸವರಾಜು.(ವಿರಾಜಪೇಟೆ) : ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಕೆ.ಎಸ್.ಐ.ಎಂ.ಸಿ. ಯನ್ನು ಮುಚ್ಚಲು ಸರ್ಕಾರ ನಿರ್ಧರಿಸಿದೆಯೇ ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣವೇನು ;

ಇ) ಯಾವಾಗ ಮುಚ್ಚುವ ಪ್ರಕ್ರಿಯೆ ಪೂರ್ಣಗೊಳಿಸಲಾಗುತ್ತದೆ ;

ಈ) ಇದರಿಂದ ಇಲ್ಲಿಯ ಕಾರ್ಮಿಕ ನೌಕರರು ಬೀದಿಪಾಲಾಗುವುದಿಲ್ಲವೇ ;

ಉ) ಈ ನಿಗಮ ಸ್ಥಾಪನೆಯಾಗಿದ್ದು ಯಾವಾಗ ; ಹಾಗು ಯಾವ ಉದ್ದೇಶಕ್ಕಾಗಿ ಸ್ಥಾಪಿಸಲಾಗಿತ್ತು;

ಊ) ನಿಗಮ ಮುಚ್ಚುವ ಕಾರ್ಯದಿಂದ ಇಲ್ಲಿ ನೌಕರರನ್ನು ಬೇರೆ ಇಲಾಖೆಗಳಿಗೆ ಕಳುಹಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ ; ಅಥವಾ ಇವರನ್ನು ಸ್ವಯಂ ನಿವೃತ್ತಿಗೊಳಿಸಲಾಗುವುದೇ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ(ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಸರ್ಕಾರವು ಪಾರದರ್ಶಕತೆ ಕಾಯಿದೆ ಜಾರಿಗೊಳಿಸಿದ ಹಿನ್ನೆಲೆಯಲ್ಲಿ.

ಇ) ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.

ಈ) ಸ್ವಯಂ ನಿವೃತ್ತಿ ನೀಡಲಾಗುತ್ತಿದೆ.

ಉ) 1984 ಸೆಪ್ಟೆಂಬರ್ ರಾಜ್ಯ ಸಣ್ಣ ಕೈಗಾರಿಕೆಗಳಿಗೆ ಮಾರುಕಟ್ಟೆ ಸೌಲಭ್ಯ ಒದಗಿಸಲು ಸ್ಥಾಪಿಸಲಾಗಿತ್ತು.

ಊ) ನಿಗಮದಿಂದ ಹೊರಗಡೆ ನಿಯೋಜನೆ ಮೇಲಿರುವ ನೌಕರರನ್ನು ಆಯಾ ಇಲಾಖೆಯಲ್ಲಿ ನೇಮಿಸಲು ಪರಿಶೀಲಿಸಲಾಗುತ್ತಿದೆ. ಉಳಿದ ಸಿಬ್ಬಂದಿಗೆ ಸ್ವಯಂ ನಿವೃತ್ತಿ ನೀಡಲಾಗುತ್ತಿದೆ.